ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ಕಾರ್ಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/93/2015-16. ದಿನಾಂಕ:23-08-2016.

| ವಾದಿಗಳು | ಪ್ರತಿವಾದಿಗಳು |
|---|---|
| ಕೋಣೆ ಗೌರಮ್ಮ ಗಂಡ ಕೋಣೆ ಗುರುಸಿದ್ದಪ್ಪ ವಿದ್ಯಾನಗರ ಪ್ರೀಯಾದರ್ಶಿನಿ ಹಾಸ್ಟಲ್ ಹತ್ತಿರ ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು | ಕೋಣೆ ಶೇಖರಪ್ಪ ತಂದೆ ಲೇಟ್ ಕೆ.ರುದ್ರಪ್ಪ ಈರಣ್ಣನ ಗುಡಿಹತ್ತಿರ ಕಂದಗಲ್ಲು ಗ್ರಾಮ ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಉಜ್ಜನಿ ಗ್ರಾಮದ ಸನಂ 235/1. ವಿಸ್ತೀರ್ಣ 1-00. ಎಕ್ರೆ ಜಮೀನನ್ನು ಕ್ರಯ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಉಜ್ಜನಿ ಗ್ರಾಮದ ಸನಂ 235/1. ವಿಸ್ತೀರ್ಣ 1-00. ಎಕ್ರೆ ಜಮೀನನ್ನು ಸದರಿ ಗ್ರಾಮದ ಕೋಣೆ ಶೇಖರಪ್ಪ ತಂದೆ ಲೇಟ್ ಕೆ.ರುದ್ರಪ್ಪ ಇವರಿಂದ ಸದರಿ ತಾಲೂಕು ಕೊಟ್ಟೂರು ಪಟ್ಟಣದ ಕೋಣೆ ಗೌರಮ್ಮ ಗಂಡ ಕೋಣೆ ಗುರುಸಿದ್ದಪ್ಪ ಇವರು ದಿನಾಂಕ 08-06-2015 ರ ಡಾಕ್ಯುಮೆಂಟ್ ನಂಬರ್: 702/2015-16. ರ ಪ್ರಕಾರ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಉಜ್ಜನಿ ಇವರು ನಮೂನೆ-21 ನೋಟಿಸನ್ನು ದಿನಾಂಕ 15-06-2015. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಗ್ರಾಮದ ಸದರಿ ವಿಕ್ರಯದಾರರಾದ ಕೋಣೆ ಶೇಖರಪ್ಪ ತಂದೆ ಲೇಟ್ ಕೆ.ರುದ್ರಪ್ಪ ಇವರು ಇವರು ನಮೂನೆ-21 ಕ್ಕೆ ಸಹಿ ಮಾಡಿಲ್ಲದ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 139/2014-15. ದಿನಾಂಕ 14-07-2015 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 16-03-2016 ರಿಂದ 23-08-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ತಕರಾರುದಾರರು ಗೈರು ಹಾಜರಾಗಿರುತ್ತಾರೆ. ಅರ್ಜಿದಾರರು ಉಜ್ಜನಿ ಗ್ರಾಮದ ಸನಂ 235/1. ವಿಸ್ತೀರ್ಣ 1-00. ಎಕ್ರೆ ಜಮೀನನ್ನು ಸದರಿ ಗ್ರಾಮದ ಕೋಣೆ ಶೇಖರಪ್ಪ ತಂದೆ ಲೇಟ್ ಕೆ.ರುದ್ರಪ್ಪ ಇವರಿಂದ ದಿನಾಂಕ 08-06-2015 ರ ಡಾಕ್ಯುಮೆಂಟ್ ನಂಬರ್: 702/2015-16. ರ ಪ್ರಕಾರ ರೂ: 95.000/- ಗಳಿಗೆ ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತೇನೆ. ಕಾರಣ ಸದರಿ ಕ್ರಯ ಪತ್ರ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಗೈರು ಹಾಜರಾಗಿರುತ್ತಾರೆ. ಅವರಿಗೆ ಜಾರಿ ಮಾಡಲಾಗಿದ್ದರೂ ಹಾಜರಾಗಿ ತಮ್ಮ ತಕರಾರು ಬಗ್ಗೆ ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲ

ಮು.ತಿ.ನೋ:-2

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ತಕರಾರುದಾರರು ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ. ಕಂದಾಯ ನ್ಯಾಯಾಲಯಕ್ಕೆ ನೊಂದಾಯಿತ ಕ್ರಯ ಪತ್ರವನ್ನು ರದ್ದು ಪಡಿಸುವ ಅಧಿಕಾರ ಇಲ್ಲದಿರುವುದರಿಂದ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**-:ಆದೇಶ:-**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಉಜ್ಜನಿ ಗ್ರಾಮದ ಸನಂ 235/1. ವಿಸ್ತೀರ್ಣ 1-00. ಎಕ್ರೆ ಜಮೀನನ್ನು ದಿನಾಂಕ: 08-06-2015 ರ ಡಾಕ್ಯುಮೆಂಟ್ ನಂಬರ್: 702/2015-16. ರ ಕ್ರಯ ದಸ್ತಾವೇಜು ಪ್ರಕಾರ ಅರ್ಜಿದಾರರಾದ ಹಾಗೂ ಕ್ರಯದಾರರಾದ ಕೋಣೆ ಗೌರಮ್ಮ ಗಂಡ ಕೋಣೆ ಗುರುಸಿದ್ದಪ್ಪ. ಕೊಟ್ಟೂರು ಪಟ್ಟಣ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 23-08-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಚೇರಿ, ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಕೋಣೆ ಗೌರಮ್ಮ ಗಂಡ ಕೋಣೆ ಗುರುಸಿದ್ದಪ್ಪ ವಿದ್ಯಾನಗರ ಪ್ರೀಯಾದರ್ಶಿನಿ ಹಾಸ್ಟಲ್ ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಕೋಣೆ ಶೇಖರಪ್ಪ ತಂದೆ ಲೇಟ್ ಕೆ.ರುದ್ರಪ್ಪ ಈರಣ್ಣನ ಗುಡಿ ಹತ್ತಿರ ಕಂದಗಲ್ಲು ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.